# ಪ್ರೇಮಪಕ್ಷಿಗಳ ನಡುವೆ ಭಿನ್ನಾಭಿಪ್ರಾಯಗಳ ಅಪಸ್ವರ

ಶೂಟಿಂಗ್ ಯುನಿಟ್‌ನ ಪಕ್ಕದ ಮರದ ಕೆಳಗೆ ಅಮ್ಮುವಿಗಾಗಿ ಕಾದುಕುಳಿತಿದ್ದ ಜಯಂತನ ಬಳಿ ಜಾಹ್ನವಿ, ಕಿರುತೆರೆ ಇಂಡಸ್ಟ್ರಿಯಲ್ಲಿನ ಕೊಳಕುತನದ ಬಗ್ಗೆ ಮಾತನಾಡತೊಡಗಿದಳು. ತನ್ನ ಹೀನ ಪರಿಸ್ಥಿತಿಗೆ ವ್ಯವಸ್ಥೆಯಲ್ಲಿನ ವಿಕೃತಿ–ಹುಳುಕುಗಳು ಕಾರಣವೇನೊ ಎಂದು ಸಂಶಯ ವ್ಯಕ್ತಪಡಿಸಿದಳು.

'ಇರಬಹುದೇನೋ... ಆದರೆ ನಿಮಗೆ ಇಷ್ಟವಿಲ್ಲವಾದರೆ ಬೇರೆ ಏನಾದರೂ ಮಾಡಬಹುದಲ್ಲವೇ?' ಎಂದ ಜಯಂತ.

'ಗ್ರೀಸ್ ಪೈಂಟ್, ಲೈಮ್ ಲೈಟ್‌ಗಳ ಆಕರ್ಷಣೆ ತೊರೆಯುವುದು ಅಷ್ಟು ಸುಲಭವಲ್ಲ. ಅಷ್ಟೇ ಅಲ್ಲ, ಲೆಟ್ ಮಿ ಟೆಲ್ ಯು ದಿ ಟ್ರೂತ್, ದಿ ಲ್ಯೂರ್ ಆಫ್ ಮನಿ ಅಂಡ್ ಫೇಮ್ ಈಸ್ ಟೂ ಸ್ಟ್ರಾಂಗ್ ಟು ಕ್ವಿಟ್. ನಮ್ಮದು ಸುಳ್ಳಿನ ಪ್ರಪಂಚ. ನಿನ್ನೆ ಒಂದು ಸೀನ್ ಇತ್ತು. ಇಟ್ ವಾಸ್ ಎ ಹಾಟ್, ಸ್ಟೀಮಿ ಸೀನ್. ನನ್ನ ಸಹ ನಟ ನನ್ನನ್ನು ಬಿಗಿದಪ್ಪಿರುತ್ತಾನೆ, ಸುಮಾರು ಎರಡು ನಿಮಿಷ. ಸ್ಕ್ರೀನ್ ಮೇಲೆ ನೋಡಿದ ನನ್ನವರು ಅದನ್ನು ಪ್ರಶ್ನಿಸಿದರೆ ನಾನು ಹೇಳ್ತೀನಿ– ಅದು ಬರೀ ಆ್ಯಕ್ಟಿಂಗ್ ಅಷ್ಟೇ ಅಂತ. ಆದರೆ ಅದಕ್ಕೆ ಮೀರಿದ್ದು ಬೇರೆ ಇತ್ತು ಅನ್ನುವುದು ಅಷ್ಟೇ ಸತ್ಯ'.

ತೊದಲು ಮಾತು, ಚಡಪಡಿಕೆ, ಅದುಮಿಟ್ಟ ಎಲ್ಲವನ್ನೂ ಅವಸರದಲ್ಲಿ ಹೊರಹಾಕಿ ಹಗುರಾಗುವ ಹಪಹಪಿ ಕಾಣುತ್ತಿತ್ತು. ಸೇವಿಸಿದ ಮತ್ತಿನ ಮಾತ್ರೆ ಅನಿರ್ಬಂಧಿತವಾಗಿ ಆಡಿ ಮುಗಿಸುವ ಹಟಕ್ಕೆ ತಳ್ಳಿದಂತಿತ್ತು ಅವಳನ್ನು.

'ನೀರನ್ನು ದೂರಬೇಡಿ... ಒಲೆಯ ಮೇಲಿಟ್ಟರೆ ಆವಿಯಾಗುತ್ತೆ, ಫ್ರಿಜ್‌ನಲ್ಲಿ ಇಟ್ಟರೆ ಮಂಜುಗಡ್ಡೆಯಾಗುತ್ತೆ. ನಾನು ಬಲಿಪಶು ಅಷ್ಟೆ. ಈ ಹುಳು ತಿಂದ ಚಿತ್ರಲೋಕ ನನ್ನನ್ನು ಹಿಂಡಿ ಹಿಪ್ಪೆ ಮಾಡಿದೆ. ಇಲ್ಲಿ ಪ್ರತಿಭೆಗೆ ಮಾತ್ರ ಪುರಸ್ಕಾರ ಅನ್ನುವುದು ಒಂದು ಜೋಕ್ ಅಷ್ಟೆ, ಕ್ಯಾಸ್ಟ್ ಕೌಚಿಂಗ್ ಈಸ್ ವೆರಿ ವೆರಿ ರಿಯಲ್. ಇಲ್ಲಿ ಯಾವ ಆ್ಯಕ್ಟಿಂಗ್ ಟ್ಯಾಲೆಂಟು ಬೇಕಾಗಿಲ್ಲ. ವಿ ಆರ್ ಆಲ್ ಟಾಕಿಂಗ್ ಹೆಡ್ಸ್ ಅಂಡ್ ರಿಯಾಕ್ಟಿಂಗ್ ಫೇಸಸ್ ಅಷ್ಟೆ. ಅವಕಾಶ ಬೇಕು ಅಂದ್ರೆ ಅದರ ಬೆಲೆ ತೆರಬೇಕು.

'ರಂಗ ಮಂಟಪಕೆ ಮಂಚಗಳೇ ಮೆಟ್ಟಿಲುಗಳು'.

ಬಾಯಾರಿದಂತೆ, 'ಸ್ವಲ್ಪ ನೀರು ತಂದು ಕೊಡ್ತೀರ?'

ಜಯಂತ್ ತಂದು ಕೊಟ್ಟ ನೀರು ಕುಡಿಯುತ್ತಾ, 'ಮೊನ್ನೆ ಮೊನ್ನೆ ತನಕ ನಾನು ಡೈರೆಕ್ಟರ್ ದಿನೇಶನ ಪಟ್ಟದರಸಿ, ಈಗ ಆ ಜಾಗದಲ್ಲಿ ಇನ್ಯಾರೊ... ಸದ್ಯಕ್ಕೆ ನಾನು ಕಾಲೊರೆಸುವ ಬಟ್ಟೆ... ಆರಂಭದಲ್ಲಿ ನಾನೇ ಲೀಡ್ ರೋಲ್ ಅಂದ್ರು... ಆಮೇಲೆ ಸೈಡ್ ರೋಲ್ ಮಾಡುದ್ರು. ಇವತ್ತು ನನ್ನ ರೋಲ್‌ನ ವಿಷ ಹಾಕಿ ಕೊಂದೇ ಬಿಟ್ರು. ಎಷ್ಟು ಬೇಗ ಬೋರ್ ಆಗೋಗುತ್ತೆ ಇವರಿಗೆ. ಒಂದೊಂದು ಧಾರಾವಾಹಿಗೆ ಒಬ್ಬೊಬ್ಬರು ಆಗಬೇಕೇನೊ...'

'ನೀವು ಕ್ಯಾಂಟೀನ್ ಕಾಂಟ್ರಾಕ್ಟರ್ ಅಲ್ವಾ?'

'ಅಲ್ಲ'

'ತಿಳೀಲಿಲ್ಲ... ಏನೇನೊ ಮಾತಾಡಿದೆ ಅನ್ಸುತ್ತೆ'.

'...'

ವಿಷಾದದ ಹೊರೆಯಡಿ ಬಳಲಿ ಕುಸಿದಂತೆ, ಹಾಗೆ ಕಟ್ಟೆಯ ಮೇಲೆ ನಿದ್ದೆಗೆ ಜಾರಿದಂತೆ ಚಾಚಿಕೊಂಡಳು. ಜಯಂತ ಪುಸ್ತಕ ಬದಿಗಿಟ್ಟು ಆಳವಾದ ಯೋಚನಾ ಸುಳಿಗೆ ಸಿಲುಕಿದ್ದ.

